Sri D. DEVARAJ URS.—These people belong to this life sentence category.

Sri M. S. KRISHNAN.—I want to know whether a bulk of them are being released in August 1973.

Sri D. DEVARAJ URS.—They will be a scourge on all of you.

ಶ್ರೀ ಬಿ. ಪುಟ್ಟಸ್ವಾಮಿ.—ಕೇಂದ್ರ ಜಿರ್ಲಾ ಬಂದೀಖಾನೆಗಳ ಸ್ಥಾಯಿ ಸಲಹಾಮಂಡಲ ಎಲ್ಲಿದೆ? ಅದರ ವ್ಯಾಪ್ತಿಯೇನು ? ಬೇರೊಂದು ಸ್ಥಾಯಿ ಸಮಿತಿಯನ್ನು ರಚನೆ ಮಾಡುವುದಕ್ಕೆ ಈಗ ಅವಕಾಶವಿದೆಯೇ ? ಅಥವಾ ಇಲ್ಲವೆ ?

ಶ್ರೀ ಡಿ. ದೇವರಾಜ್ ಅರಸ್.—ಎಲ್ಲೆಲ್ಲಿ ಜೈಲುಗಳಿವೆಯೋ ಅಲ್ಲೆಲ್ಲಾ ಸಾಧಾರಣವಾಗಿ ಕಮಿಟಿಗಳು ಇವೆ. ಬಿಜಾಪುರ, ಬಳ್ಳಾರಿ, ಮೈಸೂರು, ಬೆಂಗಳೂರು, ಹಾಗೂ ಬೆಳಗಾಂ—ಈ ಪ್ರದೇಶಗಳಲ್ಲೆಲ್ಲಾ ಕಮಿಟಿಗಳು ಇವೆ.

Cultivable Area in Gulbarga District

349- Sri BAPUGOWDA RAYAPPA (Shahapur).—

Will the Minister for Agriculture and Forests be pleased to state.—

(*a*) the total cuitivable acres of land available in Gulbarga District ;

(*b*) the extent of acres of land in Gulbarga District in this year that has been brought under cultivation in Kharif and Rabi Season (separate figures—Kharif and Rabi may be given) ;

(*c*) the expected quantity of foodgrains and cash crops this year out of this cultivation (figures in tonnes and value may be given) ?

Sri D. DEVARAJ URS (Chief Minister),— [on behalf of Sri K. H. PATIL (Minister for Agriculture and Forests)].—

(*a*) 30,01,520 acres.

(*b*) *Kharif*	*Rabhi*
5,48,332 acres	8,22,237 acres

(*c*) *Tonnes*	*Value in Rupees*
28,687	3,56,78,000

ಶ್ರೀ ಬಾಪುಗೌಡ ರಾಯಪ್ಪ.—(ಆ)ಗೆ ಉತ್ತರವಾಗಿ 13 ಲಕ್ಷ ಚಿಲ್ಲರೆ ಎಕರೆಗಳಷ್ಟು ಜಮೀನಿನಲ್ಲಿ ಸಾಗುವಳಿಯಾಗಿದೆಯೆಂದು ಹೇಳಿದೆ. (ಇ)ಗೆ ಉತ್ತರವಾಗಿ 28,687 ಟನ್ನುಗಳಷ್ಟು ವಾಣಿಜ್ಯ ಬೆಳೆಗಳ ಹಾಗೂ ಆಹಾರಧಾನ್ಯಗಳ ಪ್ರಮಾಣವನ್ನು ಈ ಸಾಗುವಳಿಯಿಂದ ಪ್ರಸಕ್ತ ವರ್ಷದಲ್ಲಿ ನಿರೀಕ್ಷಿಸಬಹುದೆಂದು ಹೇಳಿದೆ. ಈ ಅಂಕಿಅಂಶಗಳನ್ನು ಸರ್ಕಾರದವರು ಯಾವ ಒಂದು ಆಧಾರದ ಮೇಲೆ ಪ್ರತಿಯೊಂದು ತಾಲ್ಲೂಕಿನಿಂದ ಸಂಗ್ರಹಿಸಿದ್ದಾರೆ ?

†ಶ್ರೀ ಡಿ. ದೇವರಾಜ್ ಅರಸ್.—ರೆವಿನ್ಯೂ ಇಲಾಖೆ ಸಂಗ್ರಹಿಸಿದಂಥ ಅಂಕಿ ಅಂಶಗಳ ಆಧಾರದ ಮೇಲೆ ಈ ಅಂಶವನ್ನು ವ್ಯಕ್ತಪಡಿಸಲಾಗಿದೆ.

ಶ್ರೀ ಬಾಪುಗೌಡ ರಾಯಪ್ಪ.—ಅವರು ವ್ಯಕ್ತಪಡಿಸಿರುವ ಅಂಕಿ ಅಂಶಗಳು ನರಿಯಾಗಿಲ್ಲ ವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರದು ಏನಾದರೂ ಬೇರೆ ನಂಬ್ಕೆ ಇದ್ದರೆ ಹೇಳಲಿ, ನೋಡೋಣ.

ಶ್ರೀ ಬಾಪುಗೌಡ ರಾಯಪ್ಪ.—ಈ 13 ಲಕ್ಷ ಚಿಲ್ಲರೆ ಎಕರೆಗಳಲ್ಲಿ ಎಷ್ಟು ಲಕ್ಷ ಎಕರೆ ಜಮೀನು ಗಳಲ್ಲಿ ಎಲ್ಲಾವರೆ ಬಾವಿಗಳ ಮೂಲಕ ಹಾಗೂ ಲಿಫ್ಟ್ ಇರಿಗೇಷನ್ ಮೂಲಕ ನಮ್ಮರ್ ಕ್ರಾಪ್ ಬರುವಂತೆ ವ್ಯವಸ್ಥೆಮಾಡಿದ್ದೀರಿ ?

ಶ್ರೀ ಡಿ. ದೇವರಾಜ್ ಅರಸ್.—ಸಮ್ಮರ್ ಕ್ರಾಪ್ ವ್ಯವಸ್ಥೆಗೆ ಪ್ರತ್ಯೇಕ ನೋಟೀಸ್ ಬೇಕು.

Construction of Gubbi Veeranna Theatre

58. Sri GATTI CHANDRASEKHAR (Gubbi).—

Will the Minister for Education be pleased to state :—

whether the construction of a Gubbi Veeranna Theatre in memory of Dr. Gubbi Veeranna, who was like a Pole Star in the Dramatic field of Karnataka is under the consideration of Government ?

Sri V. S. KOUJALGI (Minister of State for Youth Services—[On behalf of Sri A. R. BADARINARAYANA (Minister for Eucation)].—

No.

ಶ್ರೀ ಗಟ್ಟಿ ಚಂದ್ರಶೇಖರ್.—ನನ್ನ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ. ಮಾನ್ಯ ಶ್ರೀ ಗುಬ್ಬಿ ವೀರಣ್ಣನವರ ವಿಷಯ ನನಗಿಂತಲೂ ಸರ್ಕಾರಕ್ಕೆ ಚೆನ್ನಾಗಿಯೇ ಗೊತ್ತಿದೆ. ಅವರು ಇಡೀ ಕರ್ನಾಟಕದ ರಂಗಭೂಮಿಯ ಪಿತಾಮಹರು ಹಾಗೂ ಧ್ರುವತಾರೆಯಂತಿದ್ದವರು. ಡೈಮಂಡ್ ಜೂಬಿಲಿ, ಗೋಲ್ಡನ್ ಜೂಬಿಲಿ ಮತ್ತು ಸಿಲ್ವರ್ ಜೂಬಿಲಿ ಮಹೋತ್ಸವಗಳನ್ನು ಮಾಡಿಸಿಕೊಂಡಂಥ ಮಹಾ ವ್ಯಕ್ತಿ. ಇಡೀ ಹಿಂದೂಸ್ತಾನದಲ್ಲಿ ನಾಟಕರಂಗದಲ್ಲಿ ಪ್ರಜ್ಞಾವಂತ ಯನ್ನು ಗಳಿಸಿದಂತಹವರಲ್ಲಿ ಅವರನ್ನು ಬಿಟ್ಟರೆ ಮತ್ತೆ ಯಾರೂ ಇಲ್ಲ. ಇದು ನಮ್ಮ ರಾಜ್ಯದ ಒಂದು ಹೆಮ್ಮೆ. ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಒಂದು ರವೀಂದ್ರ ಕಲಾಕ್ಷೇತ್ರವನ್ನು ಕಟ್ಟಿರುವ ಹಾಗೆ ಗುಬ್ಬಿ ವೀರಣ್ಣ ರಂಗಮಂದಿರ ಒಂದನ್ನು ನಿರ್ಮಾಣಮಾಡಿ, ಅದನ್ನು ಆಗಾಗ್ಗೆ ನಾಟಕವಾಡುವಂತಹವರಿಗೆ ಕೊಟ್ಟು ಆ ಮೂಲಕವಾದರೂ ನಾಟಕ ಕಲೆಗೆ ಸರ್ಕಾರದವರು ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಾರೆಯೇ ?

†ಶ್ರೀ ವಿ. ಎಸ್. ಕೌಜಲಗಿ.—ಅಂತಹ ಸಲಹೆ ಬಂದರೆ ಸರ್ಕಾರದಿಂದ ವಿಚಾರಮಾಡಲಾಗುತ್ತದೆ.

ಶ್ರೀ ಎಂ ಎಸ್. ಕೃಷ್ಣನ್.—ಅದರ ಬಗ್ಗೆ ಸಲಹೆಗಳು ಈಗಲೇ ಬಂದಿವೆ. ಆದ್ದರಿಂದ ಅದನ್ನು ಈಗಲಾದರೂ ವಿಚಾರಮಾಡಿ.

ಶ್ರೀ ಕೊಣಂದೂರು ಲಿಂಗಪ್ಪ.—ಇದಕ್ಕೆ ಯಾರೊಬ್ಬರ ಸಲಹೆ, ಅಭಿಪ್ರಾಯ ಬೇಕಾದುದೇ ನಿಲ್ಲ. ಸ್ವಂತ ವಿವೇಚನೆಯಿಂದ ಸರ್ಕಾರವೇ ಈ ಕೆಲಸ ಮಾಡಬಹುದಾಗಿತ್ತು. ಯಾವಾಗ ರವೀಂದ್ರ ಟಾಗೂರ್ ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ರವೀಂದ್ರ ಕಲಾ ಕ್ಷೇತ್ರವನ್ನು ಕಟ್ಟಿರುವಾಗ, ನಮ್ಮ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ತಮ್ಮ ಸ್ವಂತ ವಿವೇಚನೆಯಿಂದ